examined. It is reported that the cost of the pumping scheme would be of the order of Rs. 5 lakhs, and will require pumps of high H.P.

ಶ್ರಿ ಕೆ. ಎಚ್. ಹನುಮೇಗೌಡ —ಸುಮಾರು ೨೦ ಲಕ್ಷ ರೂಪಾಯಿಗಳಷ್ಟು ಬೆಳೆಯಾಗುತ್ತದೆ, ಈ ಏರಿಯಾದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದಲೂ ನೀರು ಕೊಡುತ್ತೇವೆಂದು ಹೇಳಿ ಅದರ ಕೆಲಸ ಮಾಡದೆ ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ಸ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅಲ್ಲಿ ಯಾವ್ಯಾವ ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ಸ್ ಮಾಡಬೇಕೆಂದು ಆಲೋಚನೆಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಈ ವಿಷಯದಲ್ಲಿ ಚೀಫ್ ಇಂಜನಿಯರ್ ಅವರು ಕ್ರಮ ತೆಗೆದುಕೊಂಡಿದ್ದಾರೆ. ೨೦ ಲಕ್ಷ ರೂಪಾಯಿಗಳಷ್ಟು ಖರ್ಚಾದರೂ ಪರವಾ ಇಲ್ಲ. ಅದಕ್ಕೆ ಬೇಕಾದ ಪಂಪ್ಸ್ ಇವೆಲ್ಲವನ್ನೂ ಹೊಂದಿಸಿಕೊಂಡು ಕೊನೆಯಪಕ್ಷ ೩ ತಿಂಗಳೊಳಗೆ ಖರೀಫ್ ಪ್ರಾರಂಭವಾಗುವುದರೊಳಗೆ ನೀರನ್ನು ಬಿಡುವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಹೇಮಾವತಿ ಪ್ರಾಜೆಕ್ಟ್ ಡ್ಯಾಂಗೆ ೩೦೦ ಗಜ ದೂರದಲ್ಲಿ ೨೫ ಅಡಿ ಎತ್ತರಕೆ ಚಾನಲ್ ಮಾಡಿಕೊಟ್ಟರೆ ಲೆಫ್ಟ್ ಬ್ಯಾಂಕ್ ಸಿಲ್ ಲೆವಲ್‌ನಿಂದ ನೀರನ್ನು ತರಲಾಗುತ್ತದೆ. ಇದರಿಂದ ಚ್ಯಾನಲ್‌ಗೆ ಹೆಚ್ಚು ನೀರು ಬರುತ್ತದೆ. ಯಾವ ವಿಧವಾದ ಖರ್ಚೂ ಸಹ ಆಗುವುದಿಲ್ಲ. ೫೦ ಸಾವಿರ ರೂಪಾಯಿಗಳಷ್ಟು ಅಂದಾಜು ಖರ್ಚು ಆಗಬಹುದೆಂದು ಹೇಳಿದ್ದಾರೆ. ಅದನ್ನೂ ಕೂಡ ಇಲಾಖೆಯವರು ಯೋಚನೆಮಾಡಿದ್ದಾರೆ. ಇದರಿಂದ ಯಾರಿಗೂ ಯಾವ ವಿಧವಾದ ತೊಂದರೆಯಾಗುವುದಿಲ್ಲ. ಪಂಪು ಸೆಟ್ಟಿನ ಆರ್ಡರನ್ನು ಜಾಗ್ರತೆಯಾಗಿ ಕೊಟ್ಟು ಈ ಯೋಜನೆಗೆ ಪರವಾನೆ ತೆಗೆದುಕೊಂಡು ಆಚ್ಚುಕಟ್ಟಿಗೆ ನೀರನ್ನು ಕೊಡುವ ಕ್ರಮವನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು. ಆಗ ಚಾನಲ್ ಮುಖಾಂತರ ಮತ್ತು ಸಿಲ್‌ಗಳ ಮುಖಾಂತರ ೩೦೦ ಗಜ ದೂರ ನೀರನ್ನು ಕೊಡಬೇಕಾಗುತ್ತದೆ. ಈಗ ಚಾನಲ್ ಕಟ್ಟಿಕೊಡಿ ಅಥವಾ ಅಲ್ಲಿಂದ ನೀರನ್ನು ಲಿಫ್ಟ್‌ಮಾಡಿ ಮೂರು ತಿಂಗಳೊಳಗೆ ಖಚಿತವಾಗಿ ನೀರು ಕೊಡುತ್ತೇವೆಂದು ಹೇಳಿದರೆ ಒಳ್ಳೆದು.

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ನಾನು ತಾಂತ್ರಜ್ಞರ ಅಭಿಪ್ರಾಯವನ್ನು ಈ ವಿಚಾರದಲ್ಲಿ ಕೇಳಿದ್ದೇನೆ. ಅದರಿಂದ ರೈತರಿಗೆ ಅನುಕೂಲವಾಗುವುದಾದರೆ, ತಾಂತ್ರಜ್ಞರಿಗೆ ಇದನ್ನು ಕೂಡ ಪರಿಶೀಲಿಸಿ ವೆಂಬುದಾಗಿ ಹೇಳುತ್ತೇನೆ.

ಅಧ್ಯಕ್ಷರು.—ಶ್ರೀ ಬಿ. ಪುಟ್ಟಸ್ವಾಮಿ ಅವರ ಕಾಲ್ ಅಟೆನ್‌ಷನ್ ನೋಟೀಸನ್ನು ಅವರು ಗೈರು ಹಾಜರು ಇರುವುದರಿಂದ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

DISTRIBUTION OF FERTILISERS THROUGH GRAMA SEVAKS

ಶ್ರೀ ಸಿ. ಬೈರೇಗೌಡ (ಕೀಮಗಲ್).—ನನ್ನ ತಾಲ್ಲೂಕಿನಲ್ಲಿ ಗೊಬ್ಬರ ಹಂಚಿಕೆ ಮಾಡುವುದನ್ನು ಗ್ರಾಮಸೇವಕರಿಗೆ ವಹಿಸುತ್ತಿದ್ದಾರೆ ಅವರು ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಾನು ಮಂತ್ರಿಗಳನ್ನು ಭೇಟಿ ಮಾಡಿದ್ದೂ ಆಯಿತು. ಡೈರೆಕ್ಟರನ್ನೂ ಬೇಟಿ ಮಾಡಿದ್ದೂ ಆಯಿತು ಇದುವರೆಗೆ ಯಾವ ಕ್ರಮವೂ ಇಲ್ಲ. ಬಂದಂಥ ಗೊಬ್ಬರವನ್ನು ಅವರೇ ತೆಗೆದುಕೊಳ್ಳುತ್ತಿದ್ದಾರೆ ನಾನು ಇದರ ಬಗ್ಗೆ ಸರ್ಕಾರದವರಲ್ಲಿ ಅನೇಕ ಸಾರಿ ಪ್ರಾರ್ಥನೆ ಮಾಡಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ. ನಾನು ನಿನ್ನೆತ್ತು ೧೧ ೧/೨ ಗಂಟೆಗೆ ನಿಮ್ಮ ಚೇಂಬರ್‌ಗೆ ಬಂದು ಹೇಳಬಹುದಾಗಿತ್ತು. ಆ ರೀತಿಯಾಗಿ ಮಾಡಲಿಕ್ಕಾಗಲಿಲ್ಲ.

ಅಧ್ಯಕ್ಷರು.—ನಾನು ನಿನ್ನೆತ್ತು ನನ್ನ ಚೇಂಬರಿಗೆ ಜಾಗ್ರತೆಯಾಗಿ ಬಂದಿದ್ದೆ. ಆಗ ಮಾನ್ಯರವರು ಬಂದು ಇದರ ವಿಚಾರವಾಗಿ ಏನೂ ಕೇಳಲಿಲ್ಲ. ನನ್ನ ಛೇಂಬರ್‌ನಲ್ಲಿ ಕೇಳದೆ ಈ ರೀತಿಯಾಗಿ ಈ ಸಭೆಯಲ್ಲಿ ಆ ವಿಚಾರವನ್ನು ಹೇಳಿದರೆ ಏನು ಪ್ರಯೋಜನ ? ಆದರಿಂದ ನನಗೂ ಲಾಭವಿಲ್ಲ, ಅವರಿಗೂ ಲಾಭವಿಲ್ಲ.

ಶ್ರೀ ಸಿ. ಬೈರೇಗೌಡ.—ನಾನು ಊರಿನಿಂದ ನಿನ್ನೆತ್ತು ಬೆಳಿಗ್ಗೆ ಬಂದಿದ್ದೇನೆ

ಅಧ್ಯಕ್ಷರು.— ಹಾಗಾದರೆ ಆ ವಿಚಾರವಾಗಿ ನಾಳೆ ಕೇಳಿ. ಸರ್ಕಾರದವರು ಉತ್ತರ ಕೊಡುತ್ತಾರೆ.